

International Journal of Kannada Research
www.kannadajournal.com

**ISSN: 2454–5813**
IJKR 2019; 5(4): 35-39
© 2019 IJKR
www.kannadajournal.com
Received: 28-08-2019
Accepted: 30-09-2019

**ಪೃಥ್ವಿರಾಜ ಟಿ**
ಸಂಶೋಧನಾ ವಿದ್ಯಾರ್ಥಿ,
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,
ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**Corresponding Author:**
**ಪೃಥ್ವಿರಾಜ ಟಿ**
ಸಂಶೋಧನಾ ವಿದ್ಯಾರ್ಥಿ,
ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ,
ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

# ಬರಗೂರು ರಾಮಚಂದ್ರಪ್ಪನವರ 'ಕರಡಿಪುರ' ಮತ್ತು 'ಸೂರ್ಯ' ಸಿನಿಮಾಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ವಸ್ತುವಿಷಯದ ವಿಶ್ಲೇಷಣಾತ್ಮಕ ಅಧ್ಯಯನ

**ಪೃಥ್ವಿರಾಜ ಟಿ**

**ಸಾರಾಂಶ**
ಕನ್ನಡ ಚಲನಚಿತ್ರರಂಗಕ್ಕೆ ಬರಗೂರು ರಾಮಚಂದ್ರಪ್ಪನವರ ಕೊಡುಗೆ ಅಪಾರವಾದದ್ದು. ಒಬ್ಬ ಸಾಹಿತಿಯಾಗಿ ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಸಲ್ಲಿಸಿರುವ ಸೇವೆಯಷ್ಟೇ ಕನ್ನಡ ಚಿತ್ರರಂಗಕ್ಕೂ ದುಡಿದಿದ್ದಾರೆ. ಸಮಾಜದಲ್ಲಿರುವ ವರ್ಗ ಸಂಘರ್ಷ, ಸ್ವಾತಂತ್ರ್ಯ, ಅಸಮಾನತೆ, ಪ್ರಜಾಪ್ರಭುತ್ವಗಳೇ ಸಿನಿಮಾದ ಪ್ರಮುಖ ವಿಷಯವಸ್ತುಗಳು. ತಮ್ಮದೇ ತಾತ್ವಿಕ ಧೋರಣೆಹೊಂದಿರುವ ಬರಗೂರರು ಸಿನಿಮಾದಲ್ಲೂ ಅದನ್ನೇ ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕನ್ನಡ ಸಿನಿಮಾ ರಂಗದಲ್ಲಿ ಹತ್ತು ಹಲವು ಪ್ರಯೋಗಮಾಡುವ ಮೂಲಕ ತಮ್ಮದೇ ಅಸ್ಥಿತ್ವ ಕಂಡುಕೊಂಡವರು ಬರಗೂರರು. 'ಒಂದು ಊರಿನ ಕಥೆ', 'ಬೆಂಕಿ', 'ಸೂರ್ಯ', 'ಕೋಟೆ', 'ಕರಡಿಪುರ', 'ಕ್ಷಾಮ', 'ಹಗಲುವೇಷ', 'ಶಾಂತಿ', 'ಜನಪದ', 'ಏಕಲವ್ಯ', 'ಉಗ್ರಗಾಮಿ', 'ಶಬರಿ', 'ಭಾಗೀರತಿ', 'ಭೂಮಿತಾಯಿ', 'ಅಂಗುಲಿಮಾಲಾ', 'ಮರಣದಂಡನೆ', 'ಬೆಕ್ಕು' ಚಲನಚಿತ್ರಗಳು ಬರಗೂರರ ನಿರ್ದೇಶಕ್ಕೆ ಹಿಡಿದ ಕನ್ನಡಿಯಾಗಿದೆ. 'ಕರಡಿಪುರ' ಮತ್ತು 'ಸೂರ್ಯ' ಚಿತ್ರಗಳಲ್ಲಿ ಉತ್ತಮ ಸಾಮಾಜಿಕ ಸಂದೇಶ ನೀಡುವ ಮೂಲಕ ಮೂಢನಂಬಿಕೆ ವಿರುದ್ಧ ಧ್ವನಿ ಎತ್ತಿದ್ದಾರೆ.'ಕರಡಿಪುರ' ಮತ್ತು 'ಸೂರ್ಯ' ಸಿನಿಮಾಗಳಲ್ಲಿ ಬರಗೂರರ ಪ್ರಯೋಗಶೀಲತೆ, ಬಂಡಾಯ ಸಾಹಿತ್ಯದ ತುಡಿತ, ಸಾಮಾಜಿಕ ಕಾಳಜಿ, ಮೂಢನಂಬಿಕೆ ವಿರುದ್ಧ ಮೂಡಿಸಿರುವ ಜಾಗೃತಿ ಬಗ್ಗೆ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ. ಸಾಹಿತ್ಯ ಮತ್ತು ಚಲನಚಿತ್ರಗಳಲ್ಲಿ ತುಳಿತಕ್ಕೊಳಗಾದವರು ಮತ್ತು ಶೋಷಿತರ ಪರವಾಗಿ ಚಿತ್ರ ನಿರ್ಮಾಣ ಮಾಡಿದ್ದು, ಈ ಚಿತ್ರಗಳಲ್ಲಿ ಸಾಮಾಜಿಕ ಸ್ಥಿತಿಗತಿ, ಮೂಢನಂಬಿಕೆ, ನಿರಂತರವಾಗಿ ನಡೆಯುತ್ತಿರುವ ಹೆಣ್ಣಿನ ಶೋಷಣೆಬಗ್ಗೆ ಬೆಳಕು ಚೆಲ್ಲಲಾಗಿದೆ. ಈ ನಿಟ್ಟಿನಲ್ಲಿ 'ಕರಡಿಪುರ' ಮತ್ತು 'ಸೂರ್ಯ' ಚಿತ್ರಗಳವಸ್ತುವಿಷಯವನ್ನು ವಿಶ್ಲೇಷಣಾತ್ಮಕವಾಗಿ ಈ ಸಂಶೋಧನಾ ಲೇಖನದಲ್ಲಿ ಅಧ್ಯಯನ ಮಾಡಲಾಗಿದೆ.

**ಮುಖ್ಯಪದಗಳು:** ಬರಗೂರು ರಾಮಚಂದ್ರಪ್ಪ, ಸೂರ್ಯ, ಕರಡಿಪುರ, ಬಂಡಾಯ ಸಾಹಿತ್ಯ

## ಪೀಠಿಕೆ

ಕನ್ನಡ ಸಾಹಿತ್ಯ ಲೋಕದಲ್ಲಿ ಅಸಂಖ್ಯಾತ ಸಾಹಿತಿಗಳಿದ್ದರೂ ಬರಗೂರು ರಾಮಚಂದ್ರಪ್ಪನವರು ಎಲ್ಲರಿಗಿಂತ ಭಿನ್ನವಾಗಿ ನಿಲ್ಲುತ್ತಾರೆ. ಏಕೆಂದರೆ ಬರಗೂರರು ಕೇವಲ ಸಾಹಿತಿಯಾಗಿ ಗುರುತಿಸಿಕೊಳ್ಳದೇ, ಅನೇಕ ಜ್ಞಾನ ಶಾಖೆಗಳಾದ ಸಿನಿಮಾ, ಶಿಕ್ಷಣ, ಭಾಷೆಬೆಳವಣಿಗೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅಲ್ಲದೇ ಈ ಎಲ್ಲಾ ಕ್ಷೇತ್ರಗಳಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಕೆಲ ಸಾಹಿತಿಗಳು ಸಾಹಿತ್ಯಕ್ಕೆ ಸಾಹಿತಿತನ ತಂದುಕೊಟ್ಟು ಸಾಹಿತಿಗಳೆನಿಸಿದರೆ ಬರಗೂರು ರಾಮಚಂದ್ರಪ್ಪನವರು ಸಾಹಿತ್ಯಕ್ಕೆ ಸಾಮಾಜಿಕತನದ ಸ್ಪರ್ಶ ತಂದುಕೊಡುವ ಮೂಲಕ ಹೆಸರಾಗಿದ್ದಾರೆ. ಕನ್ನಡ ಸಾಹಿತ್ಯ, ಹೋರಾಟ, ಸಂಸ್ಕೃತಿ, ರಾಜಕಾರಣ, ಸಿನಿಮಾ ಹೀಗೆ ನಾನಾ ರಂಗಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಬರಗೂರರು ಬಂಡಾಯ ಸಾಹಿತ್ಯವನ್ನು ಸಾಹಿತ್ಯ ಕ್ಷೇತ್ರಕ್ಕಷ್ಟೇ ಅಲ್ಲದೇ, ಸಿನಿಮಾ ರಂಗಕ್ಕೂ ಬಂಡಾಯದ ಘಮಲನ್ನು ಪಸರಿಸಿದ್ದಾರೆ. ಆ ಮೂಲಕ ಕನ್ನಡ ಚಲನಚಿತ್ರ ಹಾಗೂ ಸಾಹಿತ್ಯ ಕ್ಷೇತ್ರದ ಚರಿತ್ರೆಯಲ್ಲಿ ಬರಗೂರು ರಾಮಚಂದ್ರಪ್ಪನವರ ಹೆಸರು ವಿಭಿನ್ನವಾಗಿ ಕಾಣಿಸುತ್ತದೆ.

**ಬರಗೂರು ರಾಮಚಂದ್ರಪ್ಪ ನಡೆದು ಬಂದ ದಾರಿ**

ಗ್ರಾಮೀಣ ಭಾಗದಿಂದ ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿರುವ ಬರಗೂರು ರಾಮಚಂದ್ರಪ್ಪನವರು ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನ ಬರಗೂರಿನಲ್ಲಿ ಜನಿಸಿದರು. ತಮ್ಮ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಪ್ರೌಢಶಾಲಾ ಶಿಕ್ಷಣವನ್ನು ಶಿರಾ ಮತ್ತು ತುಮಕೂರಿನಲ್ಲಿ ನಡೆಸಿದರು. ಮುಂದೆ ತುಮಕೂರಿನಲ್ಲಿ ವ್ಯಾಸಂಗ ಪೂರೈಸಿ, ಮುಂದಿನ ವ್ಯಾಸಂಗಕ್ಕಾಗಿ ಪ್ರೌಢಶಾಲೆಗೆ ಉಪನ್ಯಾಸಕರಾಗಿ ಸೇರಿಕೊಂಡರು. 'ಕನಸಿನ ಕನ್ನಿಕೆ', 'ಶಿವನ ಹುಚ್ಚು ಸ್ತ್ರೀ', 'ಮುಳ್ಳಿನ ಹಾದಿ', 'ಕಾಮರಾಜ್ಯ', 'ಮೂರ್ನಾಮ', 'ಖೋಟಾನೋಟು' ಸೇರಿದಂತೆ ನಾನಾ ಕವನ ಸಂಕಲನ ಮತ್ತು ನಾಟಕಗಳನ್ನು ರಚನೆ ಮಾಡಿದರು. ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿ ಪಡೆದು ತುಮಕೂರಿನ ಸರ್ಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕ ವೃತ್ತಿಯನ್ನು ಆರಂಭಿಸಿದರು.

ಬಳಿಕ 1975ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಕನ್ನಡ ಅಧ್ಯಾಪಕರಾಗಿ ವೃತ್ತಿ ಬದುಕನ್ನು ಮುಂದುವರೆಸಿದರು. ಇದೇ ವೇಳೆ ಬಂಡಾಯ ಮನೋಭಾವನೆಗೆ ಸಾಹಿತ್ಯವನ್ನು ವೇದಿಕೆಯನ್ನಾಗಿ ಆರಿಸಿಕೊಂಡರು. ಇದೇ ಸಮಯದಲ್ಲಿ ಗೋಕಾಕ್ ಚಳವಳಿಗೆ ತೆರೆ ಹಿಂದೆಯೇ ನಿಂತು ಶ್ರಮಿಸಿದರು. ಜೊತೆ ಜೊತೆಗೆ ಬಂಡಾಯ ಸಂಘಟನೆಯನ್ನು ಕಟ್ಟಿ ಬೆಳೆಸಿದರು. ಬಂಡಾಯ ಸಾಹಿತ್ಯದ ಮೂಲಕ ಎಪ್ಪತ್ತು–ಎಂಭತ್ತರ ದಶಕದಲ್ಲಿ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ಹೊಸ ದಾರಿ ತೋರಿಸುವ ಮೂಲಕ ಪ್ರಗತಿಪರರ ಗುಂಪಿನಲ್ಲಿ ಕಾಣಿಸಿಕೊಂಡಿದ್ದಾರೆ.

**ಸಮೂಹ ಸಂವಹನ ಮಾಧ್ಯಮವಾಗಿ ಸಿನಿಮಾ**

ಸಿನಿಮಾವನ್ನು ಸಮೂಹ ಸಂವಹನ ಮಾಧ್ಯಮಗಳಲ್ಲಿ ಪರಿಣಾಮಕಾರಿ ಮಾಧ್ಯಮ ಎಂದೇ ಗುರುತಿಸಲಾಗಿದೆ. ಸಿನಿಮಾ ದೃಶ್ಯ–ಶ್ರವ್ಯ ಮಾಧ್ಯಮವಾಗಿದ್ದು, ನಾನಾ ಕಲೆ ಮತ್ತು ತಂತ್ರಜ್ಞಾನಗಳ ಮೂಲಕ ಬದುಕಿನ ವಾಸ್ತವತೆಗಳನ್ನು ಪರಿಣಾಮಕಾರಿಗಾಗಿ ಪ್ರತಿಬಿಂಬಿಸುತ್ತದೆ. ಇದೇ ಕಾರಣಕ್ಕಾಗಿ ಪ್ರಭಾವಶಾಲಿ ಮಾಧ್ಯಮವೆನಿಸಿದೆ. ಸಿನಿಮಾ ಜಗತ್ತಿನಲ್ಲಿ ಎಲ್ಲಾ ಕಡೆಗೆ ನಿಲುಕುವ ಸಾಮರ್ಥ್ಯ ಹೊಂದಿದೆ. ಜಗತ್ತಿನಲ್ಲಿ ಅತ್ಯಧಿಕ ಪ್ರಮಾಣದಲ್ಲಿ ಚಲನಚಿತ್ರಗಳನ್ನು ತಯಾರಿಸುವ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ಬರಗೂರು ರಾಮಚಂದ್ರಪ್ಪನವರೇ ಸಿನಿಮಾ ಮಾಧ್ಯಮದ ಕುರಿತು "ಜನಸಮುದಾಯದ ಜೊತೆಗಿನ ಸಂಬಂಧವನ್ನು ಗಮನಿಸಿದಾಗ ಸಿನಿಮಾ ನಿಜವಾದ ಅರ್ಥದಲ್ಲಿ ಸಮೂಹ ಮಾಧ್ಯಮ. ಸಿನಿಮಾ ಒಂದು ಉದ್ಯಮವೂ ಆಗಿದೆ. ಆದ್ದರಿಂದ ಅದನ್ನು ಸಂಸ್ಕೃತಿಯ ಭಾಗವಲ್ಲ ಎಂದು ಹೇಳಲಾಗದು. ಅಸಂಖ್ಯಾತ ಜನಸಾಮಾನ್ಯರು ಪ್ರೀತಿಸುವ ಕಾರಣಕ್ಕಾಗಿ ಜನಪ್ರಿಯ ಸಂಸ್ಕೃತಿಯ ಭಾಗವಾದ ಸಿನಿಮಾವನ್ನು ಜನಪ್ರಿಯ ಎಂಬ ಕಾರಣಕ್ಕಾಗಿ ಅಗ್ಗದ ಪ್ರಕಾರವೆಂದು ತುಚ್ಛೀಕರಿಸಲಾಗದು. ಜನಪ್ರಿಯ ಸಂಸ್ಕೃತಿಯನ್ನು ಗಂಭೀರವಾಗಿ ಪರಿಗಣಿಸಿ ಅದನ್ನು ಜನಪರ ಸಂಸ್ಕೃತಿಯಾಗಿ ಜೀವಂತವಾಗಿಡುವ ಹೊಣೆಗಾರಿಕೆಯೂ ಬೌದ್ಧಿಕ ವಲಯದ ಮೇಲಿದೆ" ಎಂದಿದ್ದಾರೆ. ಆ ಮೂಲಕ ಸಿನಿಮಾ ಮಾಧ್ಯಮದ ಪ್ರಭಾವವನ್ನು ಬಹಳ ವಿಸ್ತಾರವಾಗಿ ವಿವರಿಸಿದ್ದಾರೆ.

**ಅಧ್ಯಯನದ ಉದ್ದೇಶ ಹಾಗೂ ಪ್ರಾಮುಖ್ಯತೆ**

ಕನ್ನಡ ಚಲನಚಿತ್ರ ರಂಗಕ್ಕೆ ಬರಗೂರು ರಾಮಚಂದ್ರಪ್ಪನವರ ಕೊಡುಗೆ ಅಪಾರವಾದುದು. ಚಿತ್ರರಂಗದಲ್ಲಿ ನಾನಾ ರೀತಿಯ ಪ್ರಯೋಗಾತ್ಮಕತೆಗೆ ಹೆಸರುವಾಸಿಯಾಗಿರುವ ಬರಗೂರರು, 'ಕರಡಿಪುರ' ಮತ್ತು 'ಸೂರ್ಯ' ಚಿತ್ರಗಳಲ್ಲಿಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಸಮಾಜದಲ್ಲಿರುವ ತಾರತಮ್ಯತೆ, ಆಚರಣೆ ಹೆಸರಿನಲ್ಲಿ ಹೆಣ್ಣಿನ ಶೋಷಣೆ ವಿರುದ್ಧ ಧ್ವನಿ ಎತ್ತಿದ್ದಾರೆ. ಆ ಮೂಲಕ ಸಿನಿಮಾದಲ್ಲೂ ಬಂಡಾಯ ವಸ್ತುವನ್ನು ತೋರಿಸಿದ್ದಾರೆ. 'ಸೂರ್ಯ' ಸಿನಿಮಾದಲ್ಲಿ ಒಬ್ಬ ಶ್ರೀಮಂತ ಹೆಣ್ಣು ಕೂಡ ಸಾಮಾಜಿಕ ಸಂಕೋಲೆಗಳಿಂದ ಹೊರ ಬಂದು ಒಬ್ಬ ಜೀತದಾಳುವಿನ ಸಖ್ಯ ಬಯಸುವುದನ್ನು ಹೆಣ್ಣಿನ ಸ್ವಾತಂತ್ರ್ಯ ಎಂದು ತೋರಿಸಿದ್ದಾರೆ. 'ಕರಡಿಪುರ' ಸಿನಿಮಾದಲ್ಲಿ ಮೂಢನಂಬಿಕೆ ಮತ್ತು ಸಂಸ್ಕೃತಿ ಹೆಸರಿನಲ್ಲಿ ನಡೆಯುವ ಸಾಮಾಜಿಕ ಶೋಷಣೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಆ ನಿಟ್ಟಿನಲ್ಲಿ 'ಕರಡಿಪುರ' ಮತ್ತು 'ಸೂರ್ಯ' ಚಿತ್ರದ ವಿಶ್ಲೇಷಣಾತ್ಮಕ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ.

ಬರಗೂರು ರಾಮಚಂದ್ರಪ್ಪನವರು ಸಾಮಾಜಿಕ ಸಮಸ್ಯೆಗಳನ್ನು ಬಿಂಬಿಸುವಲ್ಲಿ ಹಾಗೂ ಮೂಢನಂಬಿಕೆ, ಆಚರಣೆಗಳ ವಿರುದ್ಧ ಸಿನಿಮಾ ಮೂಲಕ ಧ್ವನಿ ಎತ್ತಿದ್ದಾರೆ. ಹಾಗೆಯೇ 'ಕರಡಿಪುರ' ಮತ್ತು 'ಸೂರ್ಯ' ಚಿತ್ರಗಳಲ್ಲಿ ಸಮಾಜದಲ್ಲಿ ಅಸ್ಥಿತ್ವದಲ್ಲಿರುವ ಸಾಮಾಜಿಕ ಅಸಮಾನತೆ ವಿರುದ್ಧ ಎತ್ತಿರುವ ಧ್ವನಿಯನ್ನು ಅಧ್ಯಯನ ಮಾಡಲಾಗಿದೆ.ಧಾರ್ಮಿಕತೆ ಹೆಸರಿನಲ್ಲಿ ನಡೆಯುವ ಶೊಷಣೆಯನ್ನು ಅಧ್ಯಯನ ಮಾಡಲಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಮೇಲೆ ಆಗುತ್ತಿರುವ ದಬ್ಬಾಳಿಕೆ ಮತ್ತು ಆ ಹೆಣ್ಣಿಗೆ ನೀಡಬೇಕಾಗಿರುವ ಸ್ವಾತಂತ್ರ್ಯದ ಬಗ್ಗೆ ವಿಶ್ಲೇಷಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

**'ಕರಡಿಪುರ' ಚಿತ್ರದ ಸಾರಾಂಶ**

ಕರಡಿಪುರ ಎಂಬ ಊರಿಗೆ ಬರುವ ನಾಯಕ ಕುಮಾರ್ ಗೋವಿಂದ್ ಅವರನ್ನು ಬರಗೂರರು ಆಧುನಿಕ ಪ್ರಪಂಚದ ವ್ಯಕ್ತಿಯನ್ನಾಗಿ ನಿಲ್ಲಿಸಿದ್ದಾರೆ. ಈ ಚಿತ್ರದಲ್ಲಿ ಎಲ್ಲವೂ ಗೊತ್ತಿದ್ದರೂ ಅದನ್ನು ಯಾರಿಗೂ ಹೇಳಲಾಗದ ಮತ್ತು ಅದನ್ನು ಹೇಳಿದರೂ ಕೂಡ ಯಾರು ನಂಬಲಾಗದ ಸ್ಥಿತಿಯ ಒಬ್ಬ ಹುಚ್ಚಿಯ ಪಾತ್ರದಲ್ಲಿ ನಾಯಕಿ ತಾರಾ ನಟಿಸಿದ್ದಾರೆ. ಈ ಚಿತ್ರದಲ್ಲಿ ಕೊನೆವರೆಗೂ ರೋಚಕತೆಕಾಯ್ದುಕೊಂಡು ಹೋಗುವಲ್ಲಿ ಯಶಸ್ವಿಯಾಗಿರುವ ನಿರ್ದೇಶಕರು ಸಿನಿಮಾ ವೀಕ್ಷಕನಲ್ಲಿ ಕುತೂಹಲ ಇರುವಂತೆ ಮಾಡಿದ್ದಾರೆ. ಸಂಪ್ರದಾಯ ಆಚರಣೆಗಳ ಹೆಸರಿನಲ್ಲಿ ಯಾವರೀತಿ ಆಳುವ ವರ್ಗ ಮತ್ತು ಧಾರ್ಮಿಕವಾಗಿ ಜನರನ್ನು ತಪ್ಪುದಾರಿಗೆ ತರುವಂತಹವರ ವಿರುದ್ಧ ಧ್ವನಿ ಎತ್ತುವಂತಹ ಸಿನಿಮಾ 'ಕರಡಿಪುರ'. ಚಿತ್ರದಲ್ಲಿ ವಯಸ್ಸಿಗೆ ಬಂದ ಹೆಣ್ಣುಮಕ್ಕಳನ್ನು ಆಚರಣೆ ಹೆಸರಿನಲ್ಲಿ ಊರ ಹೊರಗೆ ಗುಡಿಸಲಲ್ಲಿ ಇರಿಸುವ ಸಂಪ್ರದಾಯವನ್ನು ಕರಡಿಪುರದ ಬುಡಕಟ್ಟುಜನ ಆಚರಿಸಿಕೊಂಡು ಬರುತ್ತಿರುತ್ತಾರೆ. ಕೆಲ ಸಮಯದ ನಂತರ ಆ ಜಾಗದಿಂದ ಆ ಹೆಣ್ಣುಮಕ್ಕಳು ಕಾಣೆಯಾಗುತ್ತಿರುತ್ತಾರೆ. ಆದರೆ ಈ ರೀತಿ ಕಾಣೆಯಾಗುವುದಕ್ಕೆ ನಿಜವಾದ ಕಾರಣ ಯಾರಿಗೂ ಗೊತ್ತಿರುವುದಿಲ್ಲ. ಆದರೆ ಈ ಕೆಲಸವನ್ನು ಗುಡ್ಡದ ಮೇಲಿರುವ ಕರಡಿಯೇ ಮಾಡುತ್ತಿದೆ ಎಂದು ಆ ಊರಿನಲ್ಲಿ ಇರುವ ಪೂಜಾರಿ ಹೇಳಿ ನಂಬಿಸಿರುತ್ತಾನೆ. ಅದೇ ಮಾತನ್ನು ಎಲ್ಲರೂ ನಂಬಿಕೊಂಡು ಯಾವುದೇ ಹೆಣ್ಣುಮಗಳು ವಯಸ್ಸಿಗೆ ಬಂದರೂ ಕೂಡ ಆ ಬುಡಕಟ್ಟು ಜನ ಆತಂಕದಲ್ಲಿ ಕಾಲಕಳೆಯುವಂತಹ ಸ್ಥಿತಿ ನಿರ್ಮಾಣವಾಗಿರುತ್ತದೆ. ಅದೇ ಜನಾಂಗದಲ್ಲಿ ಹುಚ್ಚಿಯಂತೆ ಆಡುವ ಒಬ್ಬ ಹೆಣ್ಣು ಮಗಳಿರುತ್ತಾಳೆ. ಆದರೆ ಆಕೆ ನಿಜವಾಗಿಯೂ ಹುಚ್ಚಿ ಆಗಿರುವುದಿಲ್ಲ.ಕೊನೆಗೆ ಕುಮಾರ್ ಗೋವಿಂದ್ ಅವರು ಆಕೆಗಾದ ಅನ್ಯಾಯಕ್ಕೆಊರ ಗೌಡ ಮಾಡಿರುವ ಅತ್ಯಾಚಾರವೇ ಕಾರಣ ಎನ್ನುವುದು ತಿಳಿಯುತ್ತದೆ.

ಊರಿನಲ್ಲಿ ನಡೆಯುತ್ತಿರುವುದೇನು ಎಂಬುದನ್ನು ಕಂಡು ಹಿಡಿಯುವ ಸಲುವಾಗಿ ನಾಯಕ ಕುಮಾರ್ ಗೋವಿಂದ್ ಅವರು ಊರ

ಗೌಡನ ಮನೆಗೆ ಬಂದಿರುತ್ತಾನೆ. ಆದರೆ ಊರಿನಲ್ಲಿ ಏನೆಲ್ಲ ನಡೆಯುತ್ತಿದೆ ಎನ್ನುವುದನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾನೆ. ಚಿತ್ರದಲ್ಲಿ ಬಿ. ಸಿ. ಪಾಟೀಲ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಊರಲ್ಲಿ ನಡೆಯುತ್ತಿರುವ ವಿಚಾರಗಳ ಬಗ್ಗೆ ರಹಸ್ಯ ಕಾರ್ಯಾಚರಣೆ ಮಾಡುತ್ತಿರುತ್ತಾರೆ. ಜೊತೆಗೆ ಅನಕ್ಷರಸ್ಥರಿಗೆ ಅಕ್ಷರ ಕಲಿಸಿ ಸುಶಿಕ್ಷಿತರನ್ನಾಗಿಸುವ ಉದ್ದೇಶ ಇವರದ್ದಾಗಿರುತ್ತದೆ.

ಸಿನಿಮಾದಲ್ಲಿ ನಾಯಕ ಬುಡಕಟ್ಟು ಜನಾಂಗವನ್ನು ಒಟ್ಟುಗೂಡಿಸುವುದು, ಅವರಿಗೆ ಅಕ್ಷರ ಜ್ಞಾನವನ್ನು ಕಲಿಸುವುದು, ಅವರಲ್ಲಿ ಮನೆ ಮಾಡಿರುವ ಮೂಢನಂಬಿಕೆಗಳ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನೂ ಮಾಡುತ್ತಿರುತ್ತಾನೆ. ಕನ್ನಡ ಪುಸ್ತಕಗಳನ್ನು ತರಿಸಿಕೊಂಡು ಬುಡಕಟ್ಟು ಜನರಿಗೆ ಅಕ್ಷರಾಭ್ಯಾಸ ಮಾಡಿಸಲು ಮುಂದಾಗುತ್ತಾನೆ. ಆದರೆ ಮೇಲು ನೋಟಕ್ಕೆ ಇದು ಬೇರೆಯದೇ ರೀತಿಯಲ್ಲಿ ಕಾಣಿಸುತ್ತಿರುತ್ತದೆ. ಹಾಗಾಗಿ ಸಹಜವಾಗಿ ವೀಕ್ಷಕರಿಗೆ ಕುತೂಹಲವನ್ನುಂಟು ಮಾಡುತ್ತದೆ.

ನಿರ್ದೇಶಕರು ಬುಡಕಟ್ಟು ಜನರ ಸಮಸ್ಯೆಯನ್ನು ದಿಲ್ಲಿ ಸರ್ಕಾರದವರೆಗೂಸಂಪರ್ಕ ಸಾಧಿಸಿದ್ದಾರೆ. ರಾಜಕೀಯವಾಗಿ ಶಕ್ತಿ ಸಂಪಾದಿಸಲು ಜಡೆ ಸ್ವಾಮಿಜೊತೆಗೆ ಸೇರಿಕೊಳ್ಳುವ ಆಡಳಿತ ವರ್ಗ, ಹೀಗೆ ನಾನಾ ರಾಜಕೀಯ ಬೆಳವಣಿಗೆಗೂ ನಾಯಕ ರವಿ ಅವರನ್ನೇ ಕಾರಣೀಭೂತರನ್ನಾಗಿ ಮಾಡಲಾಗುತ್ತದೆ. ಆದರೆ ತನ್ನದಲ್ಲದ ಕೃತ್ಯದ ಬಗ್ಗೆ ಊರಿನವರಿಗೆ ಗೊತ್ತಾದರೆ ತನಗೆ ಉಳಿಗಾಲವಿಲ್ಲ ಎಂದು ಅರಿತಜಡೆ ಸ್ವಾಮಿ ಕೂಡ ಅಲ್ಲಿಂದ ಓಡಿ ಹೋಗುತ್ತಾನೆ. ಕೊನೆಗೆ ಊರಿನವರಿಗೆ ಜಾಗೃತಿ ಮೂಡಿ ತಮಗಾಗುತ್ತಿರುವ ಅನ್ಯಾಯ ಅನಾಚಾರಗಳ ವಿರುದ್ಧ ತಿರುಗಿ ಬೀಳುತ್ತಾರೆ.

ಗ್ರಾಮೀಣ ಭಾಗದಲ್ಲಿರುವ ಜಾತಿ ವ್ಯವಸ್ಥೆ ಬಗ್ಗೆ ಬೆಳಕು ಚೆಲ್ಲಿರುವ ಬರಗೂರರು ಚಿತ್ರದಲ್ಲಿ ಊರಿನ ಗೌಡ ಬುಡಕಟ್ಟು ಜನಾಂಗದ ಹುಡುಗಿ ಅಂದರೆ ನಾಯಕಿ ಗೌರಿ ಮೇಲೆ ಅತ್ಯಾಚಾರ ಮಾಡುತ್ತಾನೆ. ಆದರೆ ಅದೇ ಗೌರಿ ಊರಲ್ಲಿ ನಡೆಯುವ ದೇವರ ಪೂಜೆಗೆ ಬಂದಾಗ ಕೀಳುಜಾತಿಯವಳು ಎಂದು ನಿಂದಿಸಿ ಕಳಿಸುತ್ತಾನೆ. ವಿಪರ್ಯಾಸವೆಂದರೆ ಗೌಡನ ಹೆಂಡತಿಗೆ ಹೆರಿಗೆ ಮಾಡಿಸಲು ಅದೇ ಬುಡಕಟ್ಟು ಜನಾಂಗದ ಮುಂದೆ ಬಂದು ಭಿಕ್ಷೆ ಬೇಡುತ್ತಾನೆ. ಒಂದು ಊರು ಎಂದ ಮೇಲೆ ಒಬ್ಬರಿಗೆ ಮತ್ತೊಬ್ಬರು ಸಹಕಾರದಿಂದ ಬಾಳಬೇಕು.ಇಲ್ಲಿ ಯಾರೂ ಮೇಲಲ್ಲ; ಯಾರೂ ಕೀಳಲ್ಲ ಎನ್ನುವ ಸಂದೇಶ ಸಾರುವ ಪ್ರಯತ್ನ ಮಾಡಿದ್ದಾರೆ ನಿರ್ದೇಶಕರು.

ಈ ಚಿತ್ರದಲ್ಲಿ ಬರಗೂರರು ಮೂಢನಂಬಿಕೆಗಳನ್ನು ನಂಬಿಕೊಂಡು ಬಂದಿದ್ದ ಜನರ ಬದುಕಿನಲ್ಲಿ ಆಧುನಿಕತೆಯ ಸವಾಲುಗಳನ್ನು ಪರಿಚಯಿಸುವುದರೊಂದಿಗೆ ಮೂಢನಂಬಿಕೆ ಮತ್ತು ಧಾರ್ಮಿಕ ಆಚರಣೆಗಳ ಜನ ಹೇಗೆ ಮೋಸ ಹೋಗುತ್ತಿದ್ದರು ಎಂಬುದನ್ನು ತೋರಿಸುವಪ್ರಯತ್ನ ಮಾಡಿದ್ದಾರೆ.

**'ಸೂರ್ಯ' ಚಿತ್ರದ ಸಾರಾಂಶ**

'ಸೂರ್ಯ' ಸಿನಿಮಾದ ಒಟ್ಟಾರೆ ವಿಷಯ ಜಮೀನ್ದಾರಿಕೆ, ರಾಜಕೀಯ ಆದರೂ ಕೂಡ ಹೆಣ್ಣೊಬ್ಬಳ ಮನಸ್ಸಿನ ಆಸೆಯನ್ನುಚಿತ್ರಿಸಲಾಗಿದೆ. ನಾಯಕ ಲೋಕೇಶ್ ಮದುವೆಯಾದಾಗಿನಿಂದ ತನ್ನ ಹೆಂಡತಿಯೊಂದಿಗೆ ಸಂಸಾರ ಮಾಡಿರುವುದಿಲ್ಲ. ಆತನಿಗೆ ಮೈಯೆಲ್ಲಾ ಕಾಯಿಲೆಗಳಿದ್ದು,ಅದನ್ನು ಮೀರಿ ಆತ ಆಕೆಯೊಂದಿಗೆ ಸೇರಿದರೆ ಆಕೆಗೂ ಆ ಕಾಯಿಲೆಗಳು ಬರುತ್ತವೆ ಎಂದು ವೈದ್ಯರು ಸಲಹೆ ನೀಡಿರುತ್ತಾರೆ. ತನ್ನ ಹೆಂಡತಿಗೆ ತೊಂದರೆ ಆಗಬಾರದೆಂದುಹೆಂಡತಿಯಿಂದ ದೂರವಿರುತ್ತಾನೆ. ಉಪ್ಪು, ಹುಳಿ, ಖಾರ ತಿನ್ನುವ ಮೈ ಕೇಳಬೇಕಲ್ಲ. ಊರ ಜನರ ಸಮಸ್ಯೆ ನಿವಾರಿಸುವ ಜಮೀನ್ದಾರ ತನ್ನ ಸಮಸ್ಯೆಯನ್ನು ನಿವಾರಿಸಿಕೊಳ್ಳಲಾಗದೆ ಮಾನಸಿಕವಾಗಿ ಜರ್ಜರಿತನಾಗುತ್ತಾನೆ. ಈ ಮಧ್ಯೆ ಸ್ವಲ್ಪ ವಿದ್ಯೆಯನ್ನು ಕಲಿತಿದ್ದ ರಾಮಣ್ಣ ಊರಿಗೆ ತಾನೇ ನಾಯಕನಾಗಬೇಕೆಂದುತೀರ್ಮಾನಿಸಿ ಜಮೀನ್ದಾರನನ್ನು ಮುಗಿಸಬೇಕು ಎಂದು ಹೊಂಚು ಹಾಕುತ್ತಿರುತ್ತಾನೆ.

ಮನೆಯಲ್ಲಿ ಜೀತಕ್ಕಿದ್ದಕರಿಯ, ತನ್ನ ಗಂಡ ಇಲ್ಲದ ವೇಳೆ ತೊಂದರೆ ಕೊಡುತ್ತಾನೆ ಎಂದು ಕರಿಯನ ಅತ್ತಿಗೆ ಪಂಚಾಯಿತಿ ಸೇರಿಸುತ್ತಾಳೆ. ಅದೇ ಸತ್ಯವೆಂದು ತಿಳಿದ ಜಮೀನ್ದಾರ ಕರಿಯನಿಗೆ ಶಿಕ್ಷೆ ಕೊಡಲು ಮುಂದಾಗುತ್ತಾನೆ. ಜಮೀನ್ದಾರನ ಹೆಂಡತಿಯೇ ಗಂಡನ ವಿರುದ್ಧ ತಿರುಗಿ ಬೀಳುತ್ತಾಳೆ. ಅದಕ್ಕೆ ಸಿಟ್ಟಾಗಿ ಜಮೀನ್ದಾರ ಮನೆಯಿಂದ ಹೊರ ನಡೆಯುತ್ತಾನೆ.

ಆಗ ಪಂಚಾಯಿತಿಯಲ್ಲಿ ಸೀತಕ್ಕ, ಕರಿಯ ಮತ್ತು ಅವರ ಅಣ್ಣನ ಕುಟುಂಬ ಬೇರೆ ಆಗುವ ಸಲಹೆನೀಡುತ್ತಾಳೆ. ಕರಿಯನಿಗೆ ತಮ್ಮ ಮೂಲೆಮನೆಯನ್ನು ಬಿಟ್ಟುಕೊಟ್ಟು ಅಲ್ಲಿಯೇ ತನ್ನ ಸಂಸಾರ ಮಾಡಿಕೊಂಡು ಹೋಗುವಂತೆಯೂ ಹೇಳುತ್ತಾಳೆ. ಇದಾದ ನಂತರ ಮನೆಯಲ್ಲಿ ಜಮೀನ್ದಾರ ಮತ್ತು ಹೆಂಡತಿ ಸೀತಕ್ಕನಿಗೆ ಮಾತಿಗೆ ಮಾತು ಬೆಳೆದು ಜಗಳವಾಗುತ್ತದೆ. ಇದರಿಂದ ಊಟ ಬಿಟ್ಟು ಸುಮ್ಮನಿದ್ದ ಹೆಂಡತಿಯನ್ನು ಓಲೈಸಲು ಮುಂದಾದ ಜಮೀನ್ದಾರ, "ನೀನು ಊಟ ಮಾಡಬೇಕು ಅಂದ್ರೆ ಆ ಕರಿಯ ಬಂದು ಹೇಳಬೇಕೇ, ನಿನಗೆ ಮನೆಯಲ್ಲಿ ಏನು ಕಡಿಮೆಯಾಗಿದೆ, ಊರ ಸುತ್ತ ಜಮೀನು, ಹಾಕಿಕೊಳ್ಳುವುದಕ್ಕೆ ಒಡವೆ, ಇನ್ನೇನು ಬೇಕು ಎಂದು ಕೇಳುತ್ತಾನೆ. ಆಗ ಆಕೆ "ನನಗೆ ಬೇರೆನೂ ಬೇಡ ನನಗೆ ಗಂಡ ಬೇಕು ಎಂದು ಕೇಳುತ್ತಾಳೆ" ಅದಕ್ಕೆ ಮರು ಮಾತಾಡದೇ ಹಿಂದೆ ಸರಿಯುತ್ತಾನೆ.

ನಂತರ ತನಗೊಂದು ಮಗು ಬೇಕು, ತಾನು ತಂದೆಯಾಗಬೇಕು ಎಂದು ವೈದ್ಯರ ಬಳಿ ಚಿಕಿತ್ಸೆ ಪಡೆಯುತ್ತಾನೆ. ಆದರೆ ವೈದ್ಯರು ಆ ಆಸೆಯನ್ನು ಬಿಡುವಂತೆ ಹೇಳುತ್ತಾರೆ. ಗಂಡ ಹೆಂಡತಿ ಕೂಡಿದರೆ ಜಮೀನ್ದಾರನಿಗೆ ಇರುವ ಕಾಯಿಲೆಗಳು ಹೆಂಡತಿಗೂ ಬರುತ್ತದೆ.ಬದುಕಿರುವ ತನಕ ಆಕೆಯ ಮುಖ ನೋಡಿಕೊಂಡು ಜೀವನ ನಡೆಸುವಂತೆ ಸಲಹೆನೀಡುತ್ತಾನೆ. ಈ ವಿಷಯ ತಿಳಿದ ನಂತರ ಸೀತಕ್ಕ ಗಂಡನ ಮೇಲಿನ ಆಸೆಬಿಟ್ಟು ತನ್ನ ಕೊಟ್ಟಿಗೆಯಲ್ಲಿ ಕೆಲಸ ಮಾಡುವ ಜೀತದಾಳು ಕರಿಯನ ಮೇಲೆ ಮನಸ್ಸು ವಾಲುತ್ತದೆ. ಹೆಂಡತಿ ತನ್ನ ಕೈ ತಪ್ಪುತ್ತಿದ್ದಾಳೆ ಎಂದು ತಿಳಿದ ಜಮೀನ್ದಾರ ಆಕೆಯನ್ನು ಕೂಡಿಯೇ ಬಿಡೋಣ ಎಂದು ಮನಸ್ಸು ಮಾಡಿದರೂ ಕೂಡ ಅದಕ್ಕೆ ಸೀತಕ್ಕ ಅವಕಾಶ ನೀಡುವುದಿಲ್ಲ.

ಆದರೆ ತನ್ನ ಕಾಮದಾಹವನ್ನು ತೀರಿಸಿಕೊಳ್ಳುವುದಕ್ಕಾಗಿ ಆಕೆ ಕರಿಯನ ಮೊರೆ ಹೋಗುತ್ತಾಳೆ. ಆದರೆ ಕರಿಯ ಆಕೆಯ ಆಸೆಯನ್ನು ನೆರವೇರಿಸಲು ಮೊದ ಮೊದಲು ಒಪ್ಪುವುದಿಲ್ಲ. ಆದರೆ ಸೀತಕ್ಕ ಕೂಡ ತನ್ನ ಪ್ರಯತ್ನವನ್ನು ನಿಲ್ಲಿಸುವುದಿಲ್ಲ. ಕೊನೆಗೆ ಆ ಕರಿಯನೊಂದಿಗೆ ಕೂಡಿಯೇ ಬಿಡುತ್ತಾಳೆ. ವಿಷಯ ತಿಳಿದರೂ ಏನು ಮಾಡಲು ಆಗದ ಸ್ಥಿತಿಯಲ್ಲಿ ಜಮೀನ್ದಾರ ಇದ್ದೂ, ಸತ್ತಂತೆ ಬದುಕುತ್ತಾನೆ. ಇತ್ತ ಊರಿನಲ್ಲಿ ತಾನು ದೊಡ್ಡ ಮನುಷ್ಯನಾಗಬೇಕೆಂದು ಹೊಂಚು ಹಾಕುತ್ತಾ ಜಮೀನ್ದಾರನಿಗೆ ತೊಂದರೆ ನೀಡುತ್ತಲೇ ಇರುತ್ತಾನೆ.

ಇತ್ತ ಸೀತಕ್ಕ ಕರಿಯನ ಜೊತೆ ಸೇರಿ ಬಸುರಿಯಾಗಿರುವ ವಿಷಯ ಜಮೀನ್ದಾರನಿಗೆ ತಿಳಿಯುತ್ತಾದರೂ, ಏನೂ ಮಾಡುವ ಸ್ಥಿತಿಯಲ್ಲಿರುವುದಿಲ್ಲ. ಇದೇ ವೇಳೆಗೆ ಜಮೀನ್ದಾರ ಕರಿಯನ ಮನೆಗೆ ಹೋಗಿ ಆತನ ಹೆಂಡತಿ ಮೇಲೆ ಅತ್ಯಾಚಾರವೆಸಗುತ್ತಾನೆ. ಪರಿಣಾಮವಾಗಿ ಚೆನ್ನಿ ಸಾವನ್ನಪ್ಪುತ್ತಾಳೆ. ಆಕೆಯ ಹೆಣವನ್ನು ಯಾರಿಗೂ ಕಾಣದ ಹಾಗೆ ಮುಚ್ಚಿ ಹಾಕಲು ಪ್ರಯತ್ನಿಸುವುದನ್ನು ಕರಿಯ ನೋಡಿ ಹಿಂಬಾಲಿಸುತ್ತಾನೆ. ಕೊನೆಗೆ ಕರಿಯನೇ ತನ್ನ ಹೆಂಡತಿಯ ಶವವನ್ನು ಹೊತ್ತುಕೊಂಡು ಹೋಗಿ ಜಮೀನ್ದಾರನ ಬಾವಿಯಲ್ಲಿ ಹಾಕುತ್ತಾನೆ.

ಕರಿಯನ ಹೆಂಡತಿ ಕೊಲೆಯಾಗಿರುವ ವಿಚಾರ ಊರಲ್ಲೆಲ್ಲಾ ಗುಲ್ಲಾಗುತ್ತದೆ. ಅಷ್ಟರ ವೇಳೆಗೆ, ವಿದ್ಯಾಭಾಸಕ್ಕೆಂದು ನಗರಕ್ಕೆ ಹೋಗಿದ್ದ ಹನುಮಂತ ಊರಿಗೆ ವಾಪಸ್ಸಾಗಿರುತ್ತಾನೆ. ಈ ಕೊಲೆಯ ಬಗ್ಗೆ ಪೊಲೀಸ್ ತನಿಖೆ ಆಗಬೇಕು, ಊರಿನಲ್ಲಿ ಬದಲಾವಣೆ ಎಂದರೆ ಜಮೀನ್ದಾರ ಹೋಗಿ ರಾಮಣ್ಣ ಬರುವುದಲ್ಲ ಎಂದು ಹೇಳುತ್ತಾನೆ.ಆ ಮೂಲಕ ಸಮಾಜದಲ್ಲಿ ಸಮಾನತೆಯ ಧ್ವನಿ ಎತ್ತುತ್ತಾನೆ. ಆದರೂ ರಾಮಣ್ಣ ಹನುಮಂತನ ಬಾಯಿ ಮುಚ್ಚಿಸಿ, ಚೆನ್ನಿ ಶವದ ಅಂತ್ಯಸಂಸ್ಕಾರ ಮಾಡಿಸುತ್ತಾನೆ. ಯಾವುದೇ ತೊಂದರೆ ಇಲ್ಲದೇ ಕೆಲಸ ಮುಗಿಸಿದ ರಾಮಣ್ಣನನ್ನು ಜಮೀನ್ದಾರ ಕರೆದು ತನ್ನ ಪಕ್ಕದಲ್ಲಿ ಕೂರಿಸಿಕೊಳ್ಳುತ್ತಾನೆ. ಆಗ ರಾಮಣ್ಣ ಈ ರೀತಿ ಮೊದಲಿನಿಂದಲೂ ನೀವು ಸಹಕಾರ ನೀಡಿದ್ದರೆ ನಾನು ನಿಮಗೆ ತೊಂದರೆ ಕೊಡುತ್ತಿರಲಿಲ್ಲ, ಸಹಕಾರ ನೀಡಿದರೆ ತಾನೇ ದೇಶ ಮುಂದುವರೆಯುವುದು ಎಂದು ಹೇಳುತ್ತಾನೆ.

ಮತ್ತೊಂದು ಕಡೆ ಊರಿನಲ್ಲಿ ಜೀತಕ್ಕಿರುವವರು ಮತ್ತು ತುಳಿತಕ್ಕೆ ಒಳಗಾದವರನ್ನು ಸಂಘಟಿಸಬೇಕು ಎಂದು ಹನುಮಂತಜನರ ಸಂಘಟನೆಗೆ ಮುಂದಾಗುತ್ತಾನೆ. ಈ ವ್ಯವಸ್ಥೆ ಬದಲಾಗಬೇಕಾದರೆ ಮೊದಲು ನಾವು ಬದಲಾಗಬೇಕು ಎಂದು ಜನರಲ್ಲಿ ಜಾಗೃತಿ ಮೂಡಿಸುತ್ತಿರುತ್ತಾನೆ. ಎಲ್ಲವೂ ಸರಿಯಾಯಿತು ಎನ್ನುತ್ತಿರುವಾಗ ಕರಿಯನನ್ನು ಕಂಡ ಜಮೀನ್ದಾರ ಆತನ ಹೆಂಡತಿ ಕೊಲೆಯನ್ನು ಕರಿಯನ ತಲೆಗೆ ಕಟ್ಟಿ ನಿರಾಳನಾಗಲು ಆತನ ವಿರುದ್ಧ ಪಂಚಾಯಿತಿ ಕರೆಯುತ್ತಾನೆ. ಪಂಚಾಯಿತಿ ಮುಂದೆ ಕರಿಯ ಕ್ಷಮಾಪಣೆ ಕೇಳುವಂತೆ ಆದೇಶಿಸುತ್ತಾನೆ. ಇದಕ್ಕೆ ಒಪ್ಪದ ಕರಿಯನಿಗೆ ಚಾವಟಿಯಿಂದ ಹೊಡೆಯಲು ಮುಂದಾದಾಗ, ಸೀತಕ್ಕ ಮನೆಯಿಂದ ಹೊರ ಬಂದು ಜಮೀನ್ದಾರ ಹೇಳುತ್ತಿರುವುದೆಲ್ಲ ಸುಳ್ಳು,ಚೆನ್ನಿಯನ್ನು ಕೊಲೆ ಮಾಡಿದ್ದು ಕರಿಯನಲ್ಲ. ಬದಲಾಗಿ ಜಮೀನ್ದಾರನೇ ಕೊಲೆ ಮಾಡಿದ್ದಾಗಿ ಹೇಳುತ್ತಾಳೆ. ಜಮೀನ್ದಾರ ಕಊರದ ಪಂಚಾಯಿತಿ ಆತನಿಗೇ ಮುಳುವಾಗುತ್ತದೆ. ಕೊನೆಗೆ ಸೀತಕ್ಕ ಕರಿಯನ ಕೈ ಹಿಡಿದು ಊರುಬಿಟ್ಟು ನಡೆಯುತ್ತಾಳೆ. ಈ ಘಟನೆಯಿಂದ ಕಂಗೆಟ್ಟ ಜಮೀನ್ದಾರ ನೆಲಕ್ಕೆ ಉರುಳಿದರೆ ಅತ್ತ ರಾಮಣ್ಣ ಊರನ್ನು ದಂಡಿಸುವ ಚಾವಟಿ ತನ್ನ ಕೈ ಸೇರಿತಲ್ಲ ಎಂದು ಸಂಭ್ರಮಿಸುತ್ತಾನೆ.

**'ಕರಡಿಪುರ' ಮತ್ತು 'ಸೂರ್ಯ' ಚಿತ್ರಗಳಲ್ಲಿ ಮೂಢನಂಬಿಕೆ ವಿರುದ್ಧದ ಜಾಗೃತಿ**

ಬರಗೂರು ರಾಮಚಂದ್ರಪ್ಪನವರು ತಮ್ಮ ಸಿನಿಮಾಗಳಲ್ಲಿ ಸಾಮಾನ್ಯವಾಗಿ ಬಂಡಾಯ ಮನೋಭಾವನೆಯನ್ನು ಚಿತ್ರಿಸಿರುವುದನ್ನು ಕಾಣಬಹುದು.ಅದೇ ರೀತಿ ಈ ಎರಡೂ ಸಿನಿಮಾಗಳಲ್ಲಿ ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ಮೂಡನಂಬಿಕೆ ಮತ್ತು ಆಡಳಿತ ವರ್ಗದವರ ಶೋಷಣೆ ಸಿನಿಮಾದ ಪ್ರಮುಖ ವಸ್ತುವಿಷಯವಾಗಿದೆ. 'ಕರಡಿಪುರ' ಸಿನಿಮಾದಲ್ಲಿ ನಾಯಕ ಕುಮಾರ್ ಗೋವಿಂದ್ ಬುಡಕಟ್ಟು ಜನಾಂಗದಲ್ಲಿ ಅಕ್ಷರಕಲಿಸುವುದಕ್ಕಾಗಿಯೇ ಬರುತ್ತಾರೆ. ಆದರೆ ಸಿನಿಮಾದುದ್ದಕ್ಕೂಆತನನ್ನು ಒಬ್ಬ ಕ್ರಾಂತಿಕಾರಿಯಂತೆ ತೋರಿಸಲಾಗಿದೆ. ಸಿನಿಮಾ ಆರಂಭದಲ್ಲಿ ಊರನ್ನು ಕಾಯುವ ಯೋಧನಂತೆ ಕಾಣುವ ನಾಯಕ ಕೊನೆಗೆ ಅಲ್ಲಿನ ಜನರನ್ನು ಸಂಘಟನೆ ಮಾಡಿ, ಅವರಲ್ಲಿದ್ದ ಅನಕ್ಷರತೆಹೋಗಲಾಡಿಸಿ ಮೂಡನಂಭಿಕೆಯಿಂದ ದೂರಮಾಡಿ, ಸಾಮಾಜಿಕ ಮತ್ತು ರಾಜಕೀಯವಾಗಿ ಹೋರಾಟ ಮಾಡುವಮನೋಭಾವನೆ ತುಂಬುತ್ತಾನೆ.

ಧಾರ್ಮಿಕವಾಗಿ ಪೂಜೆ, ಪುನಸ್ಕಾರದ ಹೆಸರಿನಲ್ಲಿ ಜನರನ್ನು ನಂಬಿಸಿ ಮೋಸಮಾಡುವವರ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶ ಹೊಂದಿದ್ದ ನಿರ್ದೇಶಕರು ಈ ಮೂಢನಂಬಿಕೆ ಹೋಗಬೇಕಾದರೆ ಅದನ್ನು ವಿಮರ್ಶೆ ಮಾಡುವ ಗುಣ ಬೆಳೆಸಿಕೊಳ್ಳಬೇಕು ಎನ್ನುವುದನ್ನು ಸೂಕ್ಷ್ಮವಾಗಿ ಹೇಳಿದ್ದಾರೆ. 'ಸೂರ್ಯ' ಸಿನಿಮಾದಲ್ಲಿಯೂ ಸಂಪ್ರದಾಯವಾದಿಗಳನ್ನು ಮೀರಿ ಮಹಿಳೆ ಸ್ವಂತ ನಿರ್ಧಾರತೆಗೆದುಕೊಂಡು ತನಗಿಷ್ಟಬಂದಂತೆ ಬದುಕಬಹುದು ಎಂಬುದನ್ನು ಹೇಳಿದ್ದಾರೆ. ಯಶೋಧರಾ ಮತ್ತು ಅಮೃತಮತಿ ಕಥೆಯನ್ನು ಆಧುನಿಕ ಸಾಮಾಜಿಕ ಸ್ಥಿತಿಗೆ ತಕ್ಕಂತೆ ಚಿತ್ರಿಸಿದ್ದಾರೆ. ಯಶೋಧರನ ಕಥೆಯಲ್ಲಿ ಅಮೃತಮತಿ ಕುದುರೆ ಲಾಯದಲ್ಲಿ ಇರುವ ಅಷ್ಟಾವಕ್ರನನ್ನು ವರಿಸಿದರೆ 'ಸೂರ್ಯ' ಸಿನಿಮಾದಲ್ಲಿ ಸೀತಕ್ಕ ತಮ್ಮ ಮನೆಯ ದನದ ಕೊಟ್ಟಿಗೆಯಲ್ಲಿ ಕೆಲಸ ಮಾಡುವ ಕರಿಯನನ್ನು ವರಿಸುತ್ತಾಳೆ.

**ಸಾಮಾಜಿಕ ಪದ್ಧತಿಗಳ ವಿರುದ್ಧ ಧ್ವನಿ**

ಸಾಮಾನ್ಯವಾಗಿ ಬರಗೂರರ ಬಹುತೇಕ ಸಿನಿಮಾಗಳಲ್ಲಿ ಸಾಮಾಜಿಕ ಸ್ಥಿತಿಗತಿ, ತುಳಿತಕ್ಕೊಳಗಾದವರ ಪರವಾದ ಧ್ವನಿ, ಸಾಮಾಜಿಕವಾಗಿ ತುಳಿತಕ್ಕೊಳಗಾದವರ ಬಗ್ಗೆ ಬೆಳಕು ಚೆಲ್ಲುವ ಕೆಲಸಮಾಡಿದ್ದಾರೆ. 'ಸೂರ್ಯ' ಸಿನಿಮಾದಲ್ಲಿ ಹಳ್ಳಿ ವಾತಾವರಣದಲ್ಲಿ ಊರಿನಲ್ಲಿ ಜಮೀನ್ದಾರ ಮತ್ತು ಪ್ರಜಾಪ್ರಭುತ್ವದ ಪ್ರತಿನಿಧಿ ಎಂದು ಹೇಳಿಕೊಳ್ಳುವರಾಮಣ್ಣನದ್ದೇ ಆಡಳಿತ.ಆಡಳಿತದ ಶೋಷಣೆಯಲ್ಲಿಯೇ ಜನರ ಬದುಕು ನಡೆಯಬೇಕು ಎಂಬ ಧೋರಣೆ ಇಟ್ಟುಕೊಂಡಿರುತ್ತಾರೆ. ಆದರೆ ಆ ಸಾಮಾಜಿಕ ಪದ್ಧತಿಗಳ ವಿರುದ್ಧ ಧ್ವನಿ ಎತ್ತುವುದಕ್ಕಾಗಿ ಬರಗೂರರು ಹನುಮಂತ ಎನ್ನುವ ಪಾತ್ರವನ್ನು ಸೃಷ್ಟಿಸಿದ್ದಾರೆ. ಈ ಪಾತ್ರದ ಪ್ರವೇಶದಿಂದ ಇಡೀ ಹಳ್ಳಿಜನರ ನಡವಳಿಕೆಯೇ ಬದಲಾವಣೆಯಾಗುತ್ತದೆ.

ರಾಮಣ್ಣ ಜಮೀನ್ದಾರನಿಗೆ ಬುದ್ಧಿ ಕಲಿಸುವುದಕ್ಕೆ ಒಮ್ಮೆ ಮಾಡಿದ್ದ ಪಂಚಾಯಿತಿ ಸರಿ ಇಲ್ಲ ಎಂದು ಹೇಳಿ ಮತ್ತೊಂದು ಪಂಚಾಯಿತಿಮಾಡುತ್ತಾನೆ. ಪಂಚಾಯಿತಿ ಮುಂದೆ ಕ್ಷಮಾಪಣೆ ಕೇಳದೇ ಇದ್ದರೆ, ಊರಿಂದ ಬಹಿಷ್ಕಾರ ಹಾಕುವುದಾಗಿ ಬೆದರಿಸುತ್ತಾರೆ. ಆದರೆ ಅಷ್ಟು ಸುಲಭವಾಗಿ ಗಡಿಪಾರು ಮಾಡಲು ಸಾಧ್ಯವಿಲ್ಲವೆಂದು ಚಿತ್ರದಲ್ಲಿ ತೋರಿಸಲಾಗಿದೆ. ಅಲ್ಲದೇ, ಆಳುವ ವರ್ಗದ ವಿರುದ್ಧ ಬಂಡಾಯದ ಧ್ವನಿ ಕೇಳಿಸುತ್ತದೆ. ಕರಿಯ ತನ್ನ ಯಜಮಾನ ಜಮೀನ್ದಾರನ ವಿರುದ್ಧ ತಿರುಗಿ ಬೀಳುವ ಧೈರ್ಯಮಾಡುತ್ತಾನೆ.

'ಕರಡಿಪುರ' ಸಿನಿಮಾದಲ್ಲಿಬುಡಕಟ್ಟು ಜನಾಂಗ ಮತ್ತು ಊರಿನ ನಡುವೆ ಇರುವಸಾಮಾಜಿಕ ಕಂದಕದ ಬಗ್ಗೆ ಬೆಳಕು ಚೆಲ್ಲುವ ಕೆಲಸ ಮಾಡಿದ್ದಾರೆ. ಅಶಿಕ್ಷಿತ ಬುಡಕಟ್ಟು ಜನರನ್ನು ಊರಿನ ಸಾಹುಕಾರ, ಜಡೆಸ್ವಾಮಿ ಮತ್ತು ಆಡಳಿತವರ್ಗ ತಮ್ಮಿಷ್ಟ ಬಂದಂತೆ ನಡೆಸಿಕೊಳ್ಳುತ್ತದೆ. ಧಾರ್ಮಿಕ ಆಚರಣೆ ನೆಪದಲ್ಲಿ ಗುಡ್ಡದ ಬಳಿ ಇರುವ ಬುಡಕಟ್ಟು ಹೆಣ್ಣುಮಕ್ಕಳನ್ನು ಬಲಿಕೊಡುವುದು ಅಪರಾಧ ಎನ್ನುವುದನ್ನು ಕೂಡ ಚಿತ್ರದಲ್ಲಿ ತೋರಿಸಿದ್ದಾರೆ.

ಮತ್ತೊಂದೆಡೆ ಬುಡಕಟ್ಟು ಮತ್ತು ಊರಿನ ಜನ ಒಂದೇ, ಪರಸ್ಪರ ಸಹಕಾರದಿಂದ ಬದುಕಿದರೆ ಮಾತ್ರ ಜೀವನ ಮಾಡುವುದಕ್ಕೆ ಸಾಧ್ಯ ಎನ್ನುವುದನ್ನು ಸಂದರ್ಭೋಚಿತವಾಗಿ ತೋರಿಸಿದ್ದಾರೆ. ಕೆಲ ಬುಡಕಟ್ಟು ಜನಾಂಗದಲ್ಲಿ ಇಂದಿಗೂ ಅಂತಹ ಆಚರಣೆಗಳು ಜೀವಂತವಾಗಿವೆ. ತಮ್ಮ ಮನೆಯಲ್ಲಿ ಇರುವಹೆಣ್ಣುಮಗಳು ಸ್ವಾಭಾವಿಕವಾಗಿ ಋತುಮತಿಯಾದರೆ ಆಕೆಯನ್ನು 3 ರಿಂದ 5 ದಿನಗಳವರೆಗೆ ಮನೆಯಿಂದ ಹೊರಗಿಡುವ ಪದ್ಧತಿ ಜೀವಂತವಾಗಿದೆ. ಈ ಕುರಿತು ಜಾಗೃತಿ ಮೂಡಿಸುವ ಪ್ರಯತ್ನ ಮಾಡಿದ್ದಾರೆ.

ಸಮಾಜದಲ್ಲಿ ಶಿಕ್ಷಣದಿಂದ ಮಾತ್ರವೇ ಬದಲಾವಣೆ ತರಲು ಸಾಧ್ಯ. ಶಿಕ್ಷಣಪಡೆದರೆ ಸಾಮಾಜಿಕ ಸ್ಥಿತಿಗತಿಗಳು ಬದಲಾವಣೆಯಾಗುವುದಕ್ಕೆ ಸಾಧ್ಯ ಎನ್ನುವುದನ್ನು 'ಕರಡಿಪುರ' ಸಿನಿಮಾದಲ್ಲಿ ಚಿತ್ರಿಸಿದ್ದಾರೆ.

**ಹೆಣ್ಣಿನ ಶೋಷಣೆ ವಿರುದ್ಧ ಧ್ವನಿ**

ಅನಾದಿಕಾಲದಿಂದಲೂ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಶೋಷಣೆ ಮಾಡಿಕೊಂಡು ಬರಲಾಗಿದೆ ಎನ್ನುವ ಅಪವಾದ ಇದೆ. ಬರಗೂರು ರಾಮಚಂದ್ರಪ್ಪನವರು ಹೆಣ್ಣಿನಮೇಲೆ ಆಗುತ್ತಿರುವ ದೌರ್ಜನ್ಯಗಳನ್ನು ಈ ಚಿತ್ರದಲ್ಲಿ ತೋರಿಸಿದ್ದಾರೆ. 'ಸೂರ್ಯ' ಮತ್ತು 'ಕರಡಿಪುರ' ಎರಡೂ ಚಿತ್ರಗಳಲ್ಲಿ ಬರಗೂರರು ಹೆಣ್ಣಿನ ಮೇಲಿನ ಶೋಷಣೆ ಮತ್ತು ಅವರ ಮನಸ್ಸಿನ ತುಮುಲಗಳನ್ನು ತಿಳಿಸುವ ಪ್ರಯತ್ನ ಮಾಡಿದ್ದಾರೆ.

'ಕರಡಿಪುರ' ಸಿನಿಮಾದಲ್ಲಿ ನಾಯಕಿ ತಾರಾ ಹುಚ್ಚಿಯಾಗುವುದಕ್ಕೆ ಕಾರಣ ಆ ಊರಿನ ಸಾಹುಕಾರ ಆತ ಆಕೆಯ ಮೇಲೆ ಅತ್ಯಾಚಾರ ಮಾಡಿ ನಂತರ ಆ ವಿಷಯವನ್ನು ಮುಚ್ಚಿ ಹಾಕುವುದಕ್ಕೆ ಹುಚ್ಚಿ ಪಟ್ಟ ಕಟ್ಟುತ್ತಾನೆ. ಆಕೆಯ ಮೇಲಾದ ಆಕ್ರಮಣದಿಂದ ಆಕೆ ಸಹಜವಾಗಿಯೇ ಮಾನಸಿಕವಾಗಿ ಖಿನ್ನತೆಗೆ ಒಳಗಾಗಿರುತ್ತಾಳೆ. ಧಾರ್ಮಿಕ ಆಚರಣೆಯ ಹೆಸರಿನಲ್ಲಿ ವಯಸ್ಸಿಗೆ ಬಂದಂತಹ ಹೆಣ್ಣು ಮಕ್ಕಳನ್ನು ಬಲಿಕೊಡುವ ಪದ್ಧತಿ ವಿರುದ್ಧವೂ ಧ್ವನಿ ಎತ್ತಿದ್ದಾರೆ. ಹೆಣ್ಣು ಮಕ್ಕಳು ನೈಸರ್ಗಿಕವಾಗಿ ಋತುಮತಿಯಾಗುವ ಕುರಿತಾಗಿಯೂ ಜನರಲ್ಲಿ ಇರುವ ತಪ್ಪು ಕಲ್ಪನೆ ಬಗ್ಗೆಯೂ ಸೂಕ್ಷ್ಮವಾಗಿ ತೋರಿಸುವ ಪ್ರಯತ್ನ ಮಾಡಿದ್ದಾರೆ.

'ಸೂರ್ಯ' ಸಿನಿಮಾದಲ್ಲೂ ಹೆಣ್ಣಿನ ಶೋಷಣೆ ಮತ್ತು ಹೆಣ್ಣು ಮನಸ್ಸು ಮಾಡಿದರೆ ಏನು ಮಾಡಬಹುದು ಎನ್ನುವುದನ್ನು ತೋರಿಸಿದ್ದಾರೆ. ಸಿನಿಮಾದ ಪಾತ್ರಧಾರಿ ಸೀತಕ್ಕ ತನ್ನ ಮನಸ್ಸಿನ ತುಮುಲವನ್ನು ಈಡೇರಿಸಿಕೊಳ್ಳುವುದಕ್ಕೆ ಮುಂದಾದಾಗ ಸಮಾಜ ಮತ್ತು ಆಕೆಯ ಗಂಡ ಅದನ್ನು ಸಹಿಸಿಕೊಳ್ಳುವುದಿಲ್ಲ. ಆದರೂ ಆಕೆ ಗಟ್ಟಿ ನಿರ್ಧಾರ ಮಾಡಿ ಕರಿಯನೊಂದಿಗೆ ಸೇರುತ್ತಾಳೆ. ಆದರೆ ಅದೇ ಕರಿಯನ ಹೆಂಡತಿಯನ್ನು ಜಮೀನ್ದಾರ ಕೊಲೆ ಮಾಡುತ್ತಾನೆ. ಇಲ್ಲಿ ತಪ್ಪು ಮಾಡಿರುವುದು ಕರಿಯ, ಸೀತಕ್ಕ ಮತ್ತು ಜಮೀನ್ದಾರನಾದರೂ ಸತ್ತಿದ್ದು ಮಾತ್ರ ಕರಿಯನ ಹೆಂಡತಿ. ಒಟ್ಟಿನಲ್ಲಿ ತಮ್ಮ ಮನಸ್ಸಿನ ತುಮುಲವನ್ನು ಬಗೆಹರಿಸಿಕೊಳ್ಳಲು ಮಹಿಳೆಯೂ ಸ್ವತಂತ್ರಳು ಎನ್ನುವುದನ್ನು 'ಸೂರ್ಯ' ಸಿನಿಮಾ ಮೂಲಕ ನಿರ್ದೇಶಕರು ಹೇಳಿದ್ದಾರೆ.

**ಬರಗೂರರ ಸಿನಿಮಾದಲ್ಲಿ ಸಂಭಾಷಣೆ ಮತ್ತು ನಿರೂಪಣಾ ಶೈಲಿ**

ಬರಗೂರರು 'ಸೂರ್ಯ' ಮತ್ತು 'ಕರಡಿಪುರ' ಎರಡೂ ಸಿನಿಮಾಗಳಲ್ಲಿ ವಿಶಿಷ್ಟ ಶೈಲಿಯ ಸಂಭಾಷಣೆಯನ್ನು ಬಳಸಿದ್ದಾರೆ. 'ಕರಡಿಪುರ'ದಲ್ಲಿ ಕೆಲ ಸಂದರ್ಭಗಳಲ್ಲಿ ನಾಯಕನ ಸಂಭಾಷಣೆ ಸಾಮಾನದಯ ಜನರಿಗೆ ಅರ್ಥವಾಗುವುದಿಲ್ಲ. ಸಂಭಾಷಣೆಯನ್ನು ಕಾವ್ಯಾತ್ಮಕವಾಗಿ ಮತ್ತು ಕಠಿಣ ಶಬ್ಧಗಳನ್ನು ಬಳಕೆ ಮಾಡಿರುವುದನ್ನು ಕಾಣಬಹುದು. ನಿರೂಪಣೆಯಲ್ಲೂ ತಮ್ಮದೇ ಶೈಲಿಯನ್ನು ಅಳವಡಿಸಿಕೊಂಡಿರುವ ಬರಗೂರರು ಈಗಿನ ಆಧುನಿಕ ಸಿನಿಮಾ ರೀತಿ ಅಲ್ಲದಿದ್ದರೂ, ಅಗತ್ಯವಿದ್ದ ಕಡೆಗೆ ಸಂಗೀತ, ಹಿನ್ನೆಲೆ ಸಂಗೀತವನ್ನು ಬಳಸಿಕೊಂಡಿದ್ದಾರೆ. 'ಸೂರ್ಯ' ಸಿನಿಮಾದ ಕೆಲವು ಸನ್ನಿವೇಶಗಳಲ್ಲಿ ಬರುವಗೀತೆಗಳು ವೀಕ್ಷಕರ ಮನಸ್ಸಿನಲ್ಲಿ ಬಹಳ ಕಾಲ ಉಳಿಯುವಂತೆ ಮಾಡುತ್ತದೆ. ಹಾಗಾಗಿ ಬರಗೂರರು ಒಂದು ಕಲಾತ್ಮಕ ಚಿತ್ರಕ್ಕೆ ಪ್ರಾಯೋಗಿಕವಾಗಿ ಚಿತ್ರಕ್ಕೆ ಬೇಕಾದಎಲ್ಲಾ ಆಯಾಮಗಳಿಂದ ಕೆಲಸ ಮಾಡಿದ್ದಾರೆ.

**ಉಪಸಂಹಾರ**

ಸಿನಿಮಾ ಒಂದು ಸಮೂಹ ಸಂವಹನ ಸಾಧನ. ಸಿನಿಮಾದ ಮೂಲಕ ನೀಡುವಂತಹ ಸಂದೇಶಗಳು ನೇರವಾಗಿ ಮನಸ್ಸನಲ್ಲಿ ಸಾಕಷ್ಟು ಪರಿಣಾಮ ಬೀರುತ್ತದೆ ಎಂಬುದು ಈ ಹಿಂದಿನ ಸಂಶೋಧನೆಗಳಲ್ಲಿ ಸಾಬೀತಾಗಿದೆ. ಇದೇ ಕಾರಣಕ್ಕಾಗಿ ಸಿನಿಮಾವನ್ನು ಒಂದು ಪ್ರಭಾವಶಾಲಿ ಸಮೂಹ ಮಾಧ್ಯಮ ಎಂದೇ ಗುರುತಿಸಲಾಗುತ್ತದೆ. ಸಾಹಿತ್ಯ ಕ್ಷೇತ್ರದಲ್ಲಿ ಕೃಷಿ ಮಾಡಿರುವ ಬರಗೂರರು ತಮ್ಮ ಬರವಣಿಗೆಗೆ ದೃಶ್ಯರೂಪ ಕೊಟ್ಟು ಸಮಾಜದ ಪ್ರತಿಯೊಬ್ಬರಿಗೂ ತಲುಪಿಸುವ ಪ್ರಯತ್ನ ಮಾಡಿದ್ದಾರೆ. ಆ ಮೂಲಕ ಕಲಾತ್ಮಕ ಚಿತ್ರಗಳನ್ನು ಪ್ರಾಯೋಗಿಕವಾಗಿ ನಿರ್ದೇಶನ ಮಾಡಿದ್ದಾರೆ. ಇವರು ನಿರ್ದೇಶನ ಮಾಡಿರುವ ಎಲ್ಲಾ ಚಿತ್ರಗಳಲ್ಲಿನ ಸಾಮಾಜಿಕ ಅಸಮಾನತೆ, ಧಾರ್ಮಿಕ ಶೋಷಣೆ, ಲಿಂಗತಾರತಮ್ಯ, ರಾಜಕೀಯ ದುರ್ಬಳಕೆಗಳನ್ನು ಪ್ರಮುಖ ವಸ್ತುವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳಾಗಿದೆ. ಸಮಾಜದಲ್ಲಿರುವ ಸಾಕಷ್ಟು ಸಮಸ್ಯೆಗಳಿಗೆ ಶಿಕ್ಷಣವೇ ಪರಿಹಾರ. ಶಿಕ್ಷಣ ಸಿಕ್ಕಾಗ ಮಾತ್ರ ಸಮಾಜದ ಸಮಸ್ಯೆಗಳ ವಿರುದ್ಧ ಬಂಡಾಯವೇಳಲು ಸಾಧ್ಯ ಎನ್ನುವುದನ್ನು'ಸೂರ್ಯ' ಮತ್ತು 'ಕರಡಿಪುರ' ಸಿನಿಮಾಗಳಲ್ಲಿ ಬರಗೂರರು ಚಿತ್ರಿಸಿದ್ದಾರೆ. ಆದರೆ ಕೆಲವು ಸನ್ನಿವೇಶಗಳನ್ನು ನಂಬುವುದಕ್ಕೆ ಅಥವಾ ಒಪ್ಪುವುದಕ್ಕೆ ಸಾಧ್ಯವಾಗದಿದ್ದರೂ ಕೂಡ, ಸಿನಿಮಾದಲ್ಲಿ ಎಲ್ಲವೂ ಸಾಧ್ಯ ಎನಿಸುತ್ತದೆ.

**ಪರಾಮರ್ಶನ ಗ್ರಂಥಗಳು**

1. ಗುಂಡಪ್ಪ ವೈಜಪ (2015) 'ಕನ್ನಡ ಚಲನಚಿತ್ರರಂಗಕ್ಕೆ ಶಂಕರನಾಗ್ ಕೊಡುಗೆ ಸಂಶೋಧನ ಗ್ರಂಥ'
2. ಸತೀಶ್ ಕುಲಕರ್ಣಿ, 'ಬರಗೂರು ರಾಮಚಂದ್ರಪ್ಪ ಬಂಡಾಯದ ಗಟ್ಟಿದನಿ', ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು.
3. ಬರಗೂರು ರಾಮಚಂದ್ರಪ್ಪ, 'ಸಿನಿಮಾ ಮತ್ತು ಸಾಹಿತ್ಯ', ಅಂಖಿತ ಪ್ರಕಾಶನ ಬೆಂಗಳೂರು.
4. ಮಾನಸ (2008) 'ಕನ್ನಡ ಕಾದಂಬರಿ ಆಧಾರಿತ ಚಲನಚಿತ್ರಗಳ ಅಧ್ಯಯನ' ಸಂಶೋಧನ ಗ್ರಂಥ.
5. ಡಾ. ಜಿ. ಪ್ರಶಾಂತ್ ನಾಯಕ, 'ಚಿಂತನ ಚಿತ್ತ', ಡಾ. ಜಿ. ಪ್ರಶಾಂತ್ ನಾಯಕ ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು.
6. ಡಾ. ಎ. ವಿ. ಲಕ್ಷ್ಮಿ ನಾರಾಯಣ (2016), 'ಸೃಜನಶೀಲ ಚಿಂತಕ ಬರಗೂರು', ಅಭಿರುಚಿ ಪ್ರಕಾಶನ, ಮೈಸೂರು.